ಸಿ.ಸಿ. ಸಂಖ್ಯೆ : 6074/2025
ಪಿ.ಡಬ್ಲ್ಯೂ : 01

**ದಿನಾಂಕಃ 15-07-2026 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು : ಆರೋಪಿ ಪರ ಶ್ರೀ. ಕೆ.ಎಸ್.ಎಲ್. ವಕೀಲರಿಂದಃ**

ನಾನು ದ್ವಿತೀಯ ಪಿಯುಸಿ ವರೆವಿಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಗೃಹಿಣಿಯಾಗಿ ಕೆಲಸ ನಿರ್ವಹಿಸುತ್ತಿದ್ದೇನೆ. ನನ್ನ ಮದುವೆ 2011 ರಲ್ಲಿ ನಡೆದಿರುತ್ತದೆ. ಈ ದಿನ ನನ್ನೊಂದಿಗೆ ನನ್ನ ಗಂಡನ ಅಣ್ಣನಾದ ಮಂಜುನಾಥ ಹೆಚ್.ಯು. ಎಂಬುವರು ಬಂದಿರುತ್ತಾರೆಂದರೆ ಸರಿ. ಸದರಿ ಮಂಜುನಾಥ ಹೆಚ್.ಯು. ನೆಲಮಂಗಲ ಪೋಲಿಸ್ ಠಾಣೆಯಲ್ಲಿ ಹೆಚ್.ಸಿ. ಆಗಿ ಕೆಲಸ ಮಾಡುತ್ತಿದ್ದಾರೆಂದರೆ ಸರಿ. ನನ್ನ ಗಂಡ ಮುತ್ತುರಾಜು ಮಾಗಡಿ ಪೋಲಿಸ್ ಠಾಣೆಯಲ್ಲಿ ಪಿ.ಸಿ ಆಗಿ ಕೆಲಸ ಮಾಡುತ್ತಿದ್ದಾರೆಂದರೆ ಸರಿ. ನಾನು ಮಾಗಡಿಯಲ್ಲಿ ಸುಮಾರು 10 ವರ್ಷಗಳಿಂದ ವಾಸವಾಗಿರುತ್ತೇನೆ. ನನ್ನ ತಂದೆಯ ಊರು ನಂದಿಹಳ್ಳಿ. ನನ್ನ ತಂದೆ ವ್ಯವಸಾಯ ಮಾಡುತ್ತಿದ್ದಾರೆ.

2. ಆರೋಪಿಯನ್ನು ಮೊದಲ ಬಾರಿಗೆ ಎಲ್ಲಿ ಮತ್ತು ಯಾವಾಗ ನೋಡಿದಿರಿ ಎಂದರೆ ಸಾಕ್ಷಿಯು ನನಗೆ ಮದುವೆ ಆದಗಿನಿಂದಲೂ ನನಗೆ ಆರೋಪಿ ಗೊತ್ತು, ಆರೋಪಿ ನನ್ನ ಗಂಡನ ಊರಿನವರು ಎಂದು ನುಡಿದಿರುತ್ತಾರೆ. ಆರೋಪಿ ಶಿವಮೊಗ್ಗದಲ್ಲಿ ಶಿಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಅವರು 2008 ರಿಂದಲೂ ಶಿವಮೊಗ್ಗದಲ್ಲಿ ವಾಸವಾಗಿರುತ್ತಾರೆಂದರೆ ಸರಿ. ಮದುವೆಯಾದ 2 ವರ್ಷಗಳವರೆವಿಗೂ ನಾನು ನನ್ನ ಗಂಡ ಊರಿನಲ್ಲಿ ವಾಸವಾಗಿದ್ದೆ, ನಂತರ ಕುದೂರಿನಲ್ಲಿ ವಾಸವಾಗಿರುತ್ತೇನೆ. ನನ್ನ ಗಂಡನ ಸಂಬಂಧಿಕರ ಬಗ್ಗೆ ನನಗೆ ಮಾಹಿತಿ ಇರುತ್ತದೆ. ನನ್ನ ಗಂಡನ ಸಂಬಂಧಿಕನಾದಂತಹ ಮುತ್ತರಾಜು ಬಿನ್ ನಾರಾಯಣಪ್ಪನವರ ಬಗ್ಗೆ ನನಗೆ ಮಾಹಿತಿ ಇರುತ್ತದೆ.

3. 2022 ರಲ್ಲಿ ಆರೋಪಿ ನನ್ನ ಬಳಿ ಸಾಲ ಕೇಳಿರುತ್ತಾರೆ. ನನ್ನ ಗಂಡನ ಊರಾದ ಹುಳ್ಳರವೆ ಗ್ರಾಮದಲ್ಲಿ ಆರೋಪಿ ಹಣ ಕೇಳಿರುತ್ತಾರೆ. ಅದಕ್ಕೂ ಪೂರ್ವದಲ್ಲಿ ನನ್ನ ಮತ್ತು ಆರೋಪಿಯ ನಡುವೆ ಯಾವುದೇ ಹಣಕಾಸಿನ ವ್ಯವಹಾರ ನಡೆದಿರುವುದಿಲ್ಲ. ಅದಕ್ಕೂ ಪೂರ್ವದಲ್ಲಿ ನಾನು ಆರೋಪಿ ಮನೆಗೆ ಹೋಗಿರುವುದಾಗಲೀ ಅಥವಾ ಆರೋಪಿ ನಮ್ಮ ಮನೆಗೆ ಬಂದಿರುವುದಾಗಲೀ ಇರುವುದಿಲ್ಲ. 2022 ರ ಮುಂಚೆ ನಿಮ್ಮ ಮತ್ತು ಆರೋಪಿಯ ನಡುವೆ ಯಾವುದಾದರೂ ಫೋನ್

ಕಾನ್‌ಟೆಕ್ಟ್ ಇತ್ತಾ ಎಂದರೆ ಸಾಕ್ಷಿ ಆರೋಪಿ ಮತ್ತು ನನ್ನ ಗಂಡನ ನಡುವೆ ಫೋನ್ ಕಾನ್‌ಟೆಕ್ಟ್ ಇತ್ತು ಎಂದು ನುಡಿದಿರುತ್ತಾರೆ. ಆರೋಪಿ ಸಾಲವನ್ನು ನನ್ನ ಗಂಡನ ಬಳಿ ಕೇಳಿದ್ದರು. ಆ ಸಮಯದಲ್ಲಿ ಮಂಜುನಾಥ ಹೆಚ್.ಯು. ರವರು ಇರಲಿಲ್ಲ. ನನ್ನ ಗಂಡನ ಹಾಗೂ ಅವರ ಸಹೋದರರಾದ ಮಂಜುನಾಥ ಹೆಚ್.ಯು. ರವರ ಫೋನ್ ನಂಬರ್ ನನಗೆ ಗೊತ್ತಿರುತ್ತದೆ. 9141359962 ನನ್ನ ಗಂಡನ ಅಣ್ಣನ ಮೊಬೈಲ್ ಸಂಖ್ಯೆ ಎಂದರೆ ಸರಿ.

4. ನನ್ನ ಬಾವನಾದ ಮಂಜುನಾಥ ಹೆಚ್.ಯು. ರವರು ದಿನಾಂಕಃ 23-06-2022 ರಂದು ಒಟ್ಟು 2,75,000/- ರೂಪಾಯಿಯನ್ನು ಮಂಜುನಾಥ ಹೆಚ್.ಯು. ರವರು ಆರೋಪಿಯ ಎಸ್.ಬಿ.ಐ. ಖಾತೆಗೆ ಜಮೆ ಮಾಡಿರುತ್ತಾರೆಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಆ ಕಾರಣದಿಂದ ಸದರಿ ಮಂಜುನಾಥ ಹೆಚ್.ಯು. ರವರು ನನ್ನೊಂದಿಗೆ ನ್ಯಾಯಾಲಯಕ್ಕೆ ಬಂದಿರುತ್ತಾರೆಂದರೆ ಸರಿಯಲ್ಲ.

5. ನನ್ನ ಗಂಡ ಮತ್ತು ನನ್ನ ಬಾವ ಮಂಜುನಾಥ ಹೆಚ್.ಯು. ರವರು ಸೇರಿ ಮುತ್ತುರಾಜು ಬಿನ್ ನಾರಾಯಣಪ್ಪನವರ ಮೂಲಕ ಸುಮಾರು 5 ಲಕ್ಷ ಹಣವನ್ನು ಆರೋಪಿಗೆ ನೀಡಿರುತ್ತಾರೆಂದರೆ ಆ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸದರಿ 5 ಲಕ್ಷದ ಪೈಕಿ 2,25,000/- ಹಣವನ್ನು ನಾನು ನನ್ನ ಖಾತೆಯಿಂದ ಚೆಕ್ ನಂಬರ್-110583 ರ ಮೂಲಕ ಆರೋಪಿಗೆ ಪಾವತಿ ಮಾಡಿರುತ್ತೇನೆಂದರೆ ಸರಿ. ನಂತರ ಆರೋಪಿ ನಾನು ನೋಟಿಸ್ ನೀಡಿದ ನಂತರ ಪ್ರತ್ಯುತ್ತರದೊಂದಿಗೆ ಆರೋಪಿ 2,25,000/- ರೂಪಾಯಿಯ ಚೆಕ್ಕನ್ನು ನನಗೆ ಕಳುಹಿಸಿದ್ದು, ನಾನು ಅದನ್ನು ನನ್ನ ಖಾತೆಗೆ ಜಮೆ ಮಾಡಿ ಅದನ್ನು ನಗದೀಕರಣ ಗೊಳಿಸಿಕೊಂಡಿರುತ್ತೇನೆಂದರೆ ಸರಿ. ನಾನು ಆರೋಪಿಯೊಂದಿಗೆ 2,25,000/- ರೂಪಾಯಿಯ ವ್ಯವಹಾರ ಹೊರತು ಪಡಿಸಿ ಬೇರೆ ಯಾವುದೇ ವ್ಯವಹಾರ ಮಾಡಿರುವುದಿಲ್ಲ.

6. ದಿನಾಂಕಃ 21-11-2022 ರಂದು 2,25,000/- ರೂಪಾಯಿಯ ಚೆಕ್ಕನ್ನು ಮಾಗಡಿಯ ನಮ್ಮ ಮನೆಯಲ್ಲಿ ನೀಡಿರುತ್ತೇನೆ. ಆಗ ಸಮಯ ಸುಮಾರು 12 ಗಂಟೆ ಆಗಿತ್ತು. ಸದರಿ

ಸಮಯದಲ್ಲಿ ನಾನು ಮತ್ತು ನನ್ನ ಗಂಡ ಇದ್ದೇವು. ಸದರಿ ಚೆಕ್ಕನ್ನು ಆರೋಪಿ ಶಿವಮೊಗ್ಗದ ಬ್ಯಾಂಕಿನಲ್ಲಿ ಹಾಜರು ಪಡಿಸಿಕೊಂಡಿರುತ್ತಾರೆ. ನಾನು ಆರೋಪಿಗೆ 2 ಬಾರಿ ಹಣವನ್ನು ನಗದಾಗಿ ನೀಡಿರುತ್ತೇನೆ. ಮೊದಲ ಬಾರಿಗೆ 3 ಲಕ್ಷ ಹಣವನ್ನು ಹುಳ್ಳರವೇ ಗ್ರಾಮದಲ್ಲಿ ದಿನಾಂಕಃ 20-02-2022 ರಂದು ನೀಡಿರುತ್ತೇನೆ. ಆ ಸಮಯದಲ್ಲಿ ನಾನು, ನನ್ನ ಗಂಡ ಮತ್ತು ಮುತ್ತುರಾಜು ಬಿನ್ ನಾರಾಯಣಪ್ಪನವರುಇದ್ದೇವು. ನಂತರ ಒಂದು ತಿಂಗಳ ಬಳಿಕೆ 2,25,000/- ರೂಪಾಯಿಯನ್ನು ನಗದಾಗಿ ನೀಡಿರುತ್ತೇನೆ. ಆ ಸಮಯದಲ್ಲಿ ನಾನು ಮತ್ತು ನನ್ನ ಗಂಡ ಇದ್ದೇವು.

7. ಮುತ್ತುರಾಜು ಬಿನ್ ನಾರಾಯಣಪ್ಪನವರ ಸಂಬಂಧ ನನ್ನೊಂದಿಗೆ ಮತ್ತು ನನ್ನ ಗಂಡನೊಂದಿಗೆ ಈಗಲೂ ಚೆನ್ನಾಗಿದೆ ಎಂದರೆ ಸರಿ. ಸದರಿ ಮುತ್ತುರಾಜು ರವರು ಆರೋಪಿಗೆ ಹಣ ನೀಡಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನನ್ನ ವಕೀಲರು ಹಾಗೂ ಮುತ್ತುರಾಜು ರವರ ವಕೀಲರು ಇಬ್ಬರು ಒಬ್ಬರೇ ಎಂದರೆ ಆ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ದಿನಾಂಕಃ 21-06-2025 ರಂದು ಆರೋಪಿಗೆ ನಾನು ನೋಟಿಸನ್ನು ನೀಡಿರುತ್ತೇನೆ. ನೋಟಿಸಿಗೆ ಮಾಹಿತಿಯನ್ನು ನೀಡಲು ನಾನು ಮತ್ತು ನನ್ನ ಗಂಡ ಹೋಗಿದ್ದೇವು. ಆರೂಪಿಗೆ ನಾನು ಮತ್ತು ಮುತ್ತುರಾಜು ಒಂದೇ ದಿವಸ ನೋಟಿಸು ನೀಡಿರುತ್ತೇವೆಂದರೆ ಸರಿಯಲ್ಲ.

**ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಅದರಂತೆ ಮುಂದೂಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು )

ಓ. ಹೇ. ಕೇ. ಸ. ಎಂ. ಒ. ನನ್ನ ಸಮಕ್ಷಮ,

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಲಯ, ಮಾಗಡಿ.